**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬಸವನ ಬಾಗೇವಾಡಿ.**

ಸಿಸಿ ನಂ: 611/2016

ಸಿಡಬ್ಲೂ 01 ಪಿಡಬ್ಲೂ 01

| | | |
|---|---|---|
| ಸಾಕ್ಷಿದಾರರ ಹೆಸರು | ಮಲ್ಲಪ್ಪ ಡಮನಾಳ | |
| ತಂದೆ/ಗಂಡನ ಹೆಸರು | ಮುರಿಗೆಪ್ಪ | |
| ವಯಸ್ಸು | 55 | ವರ್ಷ |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಕಿರಿಶ್ಯಾಳ | |

**ಸಾಕ್ಷಿಯನ್ನು ಇಂದು ದಿನಾಂಕಃ 13.08.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ಚಾಸಾ-4 ರಿಂದ 8 ರವರು ಪರಿಚಯ ಇರುತ್ತದೆ. ಆರೋಪಿತರು ನನ್ನ ತಮ್ಮಂದಿರು. ಸುಮಾರು 10 ವರ್ಷಗಳಿಂದ ನನ್ನ ಮತ್ತು ಆರೋಪಿತರ ಮಧ್ಯ ನಮ್ಮ ಕುಟುಂಬದ ಆಸ್ತಿಗಳ ಕುರಿತು ಹಿರಿಯರ ಸಮಕ್ಷಮದಲ್ಲಿ ಭಾಗ ಆಗಿ ಬೇರೆ ಬೇರೆ ಆಗಿದ್ದೇವು. ಆರೋಪಿತರು ಮತ್ತು ನಮ್ಮ ಊರಿನ ಹಿರಿಯರು ನಮ್ಮ ಮನೆಗೆ ಬಂದು ನನ್ನನ್ನು ಬಾಗೇವಾಡಿ ಕ್ರಾಸ್‌ಗೆ ರೂ.12 ಲಕ್ಷ ಹಣದ ವಿಚಾರವಾಗಿ ಮಾತನಾಡಲು ಕರೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ಆರೋಪಿತರು ಹಿರಿಯರ ಸಮಕ್ಷಮದಲ್ಲಿ ಬಾಗೇವಾಡಿ ಕ್ರಾಸ್ ಹತ್ತಿರ ಮಾತನಾಡುತ್ತಾ ಕುಳಿತಿದ್ದಾಗ 1 ನೇ ಆರೋಪಿಯು ತನ್ನ ಮೋಟಾರ್ ಸೈಕಲ್ ನ್ನು ತೆಗೆದುಕೊಂಡು ಬಂದು ನನಗೆ ಹಾಯಿಸಿರುತ್ತಾನೆ. 3 ನೇ ಆರೋಪಿಯು ಬಡಿಗೆಯಿಂದ ನನಗೆ ಹೊಡೆದಿರುತ್ತಾನೆ. 2 ನೇ ಆರೋಪಿಯು ಕಲ್ಲನ್ನು ತೆಗೆದುಕೊಂಡು ಬಂದು ನನ್ನ ದುಬ್ಬಕ್ಕೆ ಹೊಡೆದಿರುತ್ತಾನೆ. ನಂತರ ನನಗೆ

ಮೂರ್ಛೆ ಬಂದ ನಂತರ ಕೆಳಗೆ ಬಿದ್ದಿರುತ್ತೇನೆ. ನಂತರ ನಾನು ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನಂತರ ಪೋಲಿಸರು ಆಸ್ಪತ್ರೆಗೆ ಬಂದು ಗಲಾಟೆಯ ವಿಚಾರವಾಗಿ ಕೇಳಿದ್ದು ನಾನು ಗಲಾಟೆಯ ವಿಚಾರವನ್ನು ಪೋಲಿಸರಿಗೆ ಹೇಳಿರುತ್ತೇನೆ.

ಸಾಕ್ಷಿಯು ದೂರಿನ ಮೇಲೆರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ  ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಆ ದಿನ ಆರೋಪಿತರು ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲು ಮತ್ತು ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಮು.ಮಾಲುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯವಿಚಾರಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ವ ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**